ಕರ್ನಾಟಕ ಸರ್ಕಾರ

ಸಂ: ಹಿಂವಇ:ವಶಾ-1:ಸಿಆರ್-21:02-03

ಆಯುಕ್ತರವರ ಕಛೇರಿ,
ಹಿಂದುಳಿದ ವರ್ಗಗಳ ಇಲಾಖೆ, ನಂ:
14:3, ಸಿಎಫ್‌ಸಿ ಕಟ್ಟಡ, 3ನೇ
ಮಹಡಿ, ನೃಪತುಂಗ ರಸ್ತೆ, ಬೆಂಗಳೂರು
ದಿನಾಂಕ:5-7-2002

## ಸುತ್ತೋಲೆ

ವಿಷಯ:- ವೃತ್ತಿಪರ ಮುಸ್ಲಿಂ ಜಾತಿಗಳನ್ನು ಪ್ರವರ್ಗ-1 ಪ್ರವರ್ಗ-2ಎ ರಲ್ಲಿ ಹಾಗೂ ಸಾಮಾನ್ಯ ಮುಸ್ಲಿಂ ಜಾತಿಯವರನ್ನು ಪ್ರವರ್ಗ-2ಬಿ ರಲ್ಲಿ ವಿಂಗಡಿಸಿದಾಗ್ಯೂ ಪ್ರಮಾಣ ಪತ್ರ ಹಾಗೂ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡಲು ನಿರಾಕರಿಸುತ್ತಿರುವ ಬಗ್ಗೆ

ಉಲ್ಲೇಖ:- 1. ಸರ್ಕಾರದ ಸುತ್ತೋಲೆ ಸಂ: ಸಕಇ 106 ಬಿಸಿಎ 2001 ದಿನಾಂಕ:01-08-2001

2. ಸರ್ಕಾರಿ ಆದೇಶ ಸಂ: ಎಸ್‌ಡಬ್ಲ್ಯೂಡಿ 150 ಬಿಸಿಎ 94 ದಿನಾಂಕ:17-09-94

3. ಸರ್ಕಾರಿ ಆದೇಶ ಸಂ: ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ:30-03-2002

4. ಕಾರ್ಯದರ್ಶಿಗಳು, ರಾಜ್ಯ ಅಲ್ಪಸಂಖ್ಯಾತರ ಆಯೋಗ ಬೆಂಗಳೂರು ಇವರ ಕಛೇರಿ ಪತ್ರದ ಸಂಖ್ಯೆ:ಎಸ್‌ಎಂಸಿ-3:ಎಂಇಸಿ 2002 ದಿನಾಂಕ: 24-06-2002

::::

ಉಲ್ಲೇಖ(1)ರ ಸರ್ಕಾರಿ ಸುತ್ತೋಲೆ ದಿನಾಂಕ:01-08-2001ರಲ್ಲಿ ಉಲ್ಲೇಖ(2)ರ ಸರ್ಕಾರಿ ಆದೇಶದಲ್ಲಿ ಪ್ರವರ್ಗ-1, 2ಎ ಮತ್ತು 2ಬಿಗಳಲ್ಲಿನ ಮುಸ್ಲಿಂ ಜಾತಿಗಳ ಅಭ್ಯರ್ಥಿಗಳಿಗೆ ಜಾತಿ ಪ್ರಮಾಣ ಪತ್ರ ಹಾಗೂ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡುವಾಗ ವಂಶಪಾರಂಪರ್ಯವಾಗಿ ಅನುಸರಿಸಿಕೊಂಡು ಬಂದ ಜಾತಿಗಳ ಬಗ್ಗೆ ಸಾಕ್ಷಾಧಾರಗಳನ್ನು ಲಭ್ಯಪಡಿಸಿದಲ್ಲಿ ಅವುಗಳನ್ನು ಪರಿಶೀಲಿಸಿ ಅವರುಗಳ ಜಾತಿಯನ್ನು ದೃಢಪಡಿಸಿಕೊಂಡು ಜಾತಿ ಪ್ರಮಾಣ ಪತ್ರಗಳನ್ನು ಹಾಗೂ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡುವ ಬಗ್ಗೆ ನಿರ್ದೇಶನ ಹಾಗೂ ಈ ರೀತಿ ತೀರ್ಮಾನ ಕೈಗೊಳ್ಳಲು ನಿಯಮಗಳನ್ನು ಕಟ್ಟುನಿಟ್ಟಾಗಿ ಪರಿಶೀಲಿಸುವುದು ಮತ್ತು ನಿಯಮದಲ್ಲಿ ಸ್ಪಷ್ಟಪಡಿಸಿದಂತೆ ಕಾಲಮಿತಿಯಲ್ಲಿ ಜಾತಿ ಪ್ರಮಾಣ ಪತ್ರ ಮತ್ತು ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡುವುದು ಎಂಬುದಾಗಿ ಕೇಳಲಾಗಿರುತ್ತದೆ. ಸದರಿ ಸುತ್ತೋಲೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

ಆದಾಗ್ಯೂ ಸದರಿ ಜಾತಿಗಳಿಗೆ ಜಾತಿ ಪ್ರಮಾಣ ಪತ್ರ ಹಾಗೂ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡಲು ಕ್ಷೇತ್ರೀಯ ಅಧಿಕಾರಿಗಳು ನಿರಾಕರಿಸುತ್ತಿರುವ ದೂರುಗಳನ್ನು ಅಲ್ಪಸಂಖ್ಯಾತರ ಆಯೋಗಕ್ಕೆ ಬರುತ್ತಿರುವುದಾಗಿ ಉಲ್ಲೇಖ(4)ರಲ್ಲಿನ ಕಾರ್ಯದರ್ಶಿಗಳು, ರಾಜ್ಯ ಅಲ್ಪಸಂಖ್ಯಾತರ ಆಯೋಗ ಬೆಂಗಳೂರು ಇವರ ಪತ್ರದ ದಿನಾಂಕ:24-6-02ರಂತೆ ತಿಳಿದುಬಂದಿರುತ್ತದೆ.

...2...

ಜಿಲ್ಲೆಯ ಎಲ್ಲಾ ತಹಸೀಲ್ದಾರ್‌ರವರಿಗೂ ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿದೆ.